# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1020 |
| ಉತ್ತರಿಸಬೇಕಾದ ದಿನಾಂಕ | : | 23.02.2024 |
| ಸದಸ್ಯರ ಹೆಸರು | : | ಡಾ|| ಚಂದ್ರಶೇಖರ್ ಬಿ. ಪಾಟೀಲ್ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಮಾನ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| 1 | ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡ ಕ್ರಮವೇನು; | ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಅನುವಾಗುವಂತೆ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಕ್ರೀಡಾಂಗಣಗಳು ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕ್ರೀಡಾಂಗಣಗಳು ಮತ್ತು ಒಳಾಂಗಣ ಕ್ರೀಡಾಂಗಣ, ಈಜುಕೊಳ ಹಾಗೂ ವಾಲಿಬಾಲ್, ಕಬಡ್ಡಿ, ಖೋ-ಖೋ, ಬಾಸ್ಕೆಟ್‌ಬಾಲ್, ಅಥ್ಲೆಟಿಕ್ ಟ್ರ್ಯಾಕ್, ಫುಟ್ಬಾಲ್ ಇತ್ಯಾದಿ ವಿವಿಧ ಕ್ರೀಡಾಂಕಣಗಳನ್ನು ನಿರ್ಮಿಸಲಾಗಿದೆ.<br>ಕ್ರೀಡಾಂಗಣಗಳ ವಿವರವನ್ನು **ಅನುಬಂಧ**ದಲ್ಲಿ ನೀಡಲಾಗಿದೆ.<br><br>ಕರ್ನಾಟಕ ಕ್ರೀಡಾ ಪ್ರಾಧಿಕಾರ ವತಿಯಿಂದ ನುರಿತ ತರಬೇತುದಾರರಿಂದ ಕ್ರೀಡಾಪಟುಗಳಿಗೆ ಸಂಬಂಧಪಟ್ಟ ಕ್ರೀಡೆಗಳಲ್ಲಿ ದೈನಂದಿನ ತರಬೇತಿಯನ್ನು ನೀಡಲಾಗುತ್ತಿದೆ.<br><br>ವಿಜಯನಗರ ಜಿಲ್ಲೆ ಹೊರತುಪಡಿಸಿ, ಉಳಿದ 06 ಜಿಲ್ಲೆಗಳಲ್ಲಿ ಕ್ರೀಡಾ ವಸತಿ ನಿಲಯಗಳನ್ನು ಸ್ಥಾಪಿಸಿ, ಆಯಾ ಜಿಲ್ಲೆಗಳ ಕ್ರೀಡಾಪಟುಗಳಿಗೆ ಊಟೋಪಹಾರ, ವಸತಿ ಸೌಕರ್ಯ ಹಾಗೂ ತರಬೇತಿ ಸೌಲಭ್ಯವನ್ನು ಉಚಿತವಾಗಿ ನೀಡಲಾಗುತ್ತಿದೆ. |
| 2 | ಇಲ್ಲಿಯವರೆಗೆ ಎಷ್ಟು ಕ್ರೀಡಾಪಟುಗಳು ವಿವಿಧ ಕ್ರೀಡೆಗಳಿಗೆ ಕಲ್ಯಾಣ ಕರ್ನಾಟಕ ವಿಭಾಗದಿಂದ ಆಯ್ಕೆ | ರಾಜ್ಯ, ರಾಷ್ಟ್ರ, ಮತ್ತು ಅಂತರಾಷ್ಟ್ರೀಯ ಮಟ್ಟಕ್ಕೆ ಕಲ್ಯಾಣ ಕರ್ನಾಟಕ ಭಾಗದ ವಿವಿಧ ಜಿಲ್ಲೆಗಳಿಂದ ವಿವಿಧ ಕ್ರೀಡೆಗಳಲ್ಲಿ ಆಯ್ಕೆಯಾಗಿರುವ ಕ್ರೀಡಾಪಟುಗಳ ವಿವರ ಈ ಕೆಳಕಂಡಂತಿದೆ. |

<table>
<tr><td></td><td>ಆಗಿದ್ದಾರೆ; (ಮಾಹಿತಿ ಒದಗಿಸುವುದು)</td><td>
<table>
<tr><th>ಕ್ರಸಂ</th><th>ಜಿಲ್ಲೆಗಳು</th><th>ಕ್ರೀಡಾಪಟುಗಳ ಸಂಖ್ಯೆ</th></tr>
<tr><td>1</td><td>ಯಾದಗಿರಿ</td><td>30</td></tr>
<tr><td>2</td><td>ಬೀದರ್</td><td>49</td></tr>
<tr><td>3</td><td>ಕೊಪ್ಪಳ</td><td>26</td></tr>
<tr><td>4</td><td>ರಾಯಚೂರು</td><td>24</td></tr>
<tr><td>5</td><td>ಬಳ್ಳಾರಿ</td><td>20</td></tr>
<tr><td>6</td><td>ಕಲಬುರ್ಗಿ</td><td>48</td></tr>
</table>
</td></tr>
<tr><td>3</td><td>ಉನ್ನತ ಮಟ್ಟದಲ್ಲಿ ಕ್ರೀಡಾಪಟುಗಳಿಗೆ ತರಬೇತಿ ನೀಡಲು ಸರ್ಕಾರ ಕೈಗೊಂಡ ಕಾರ್ಯಕ್ರಮಗಳು ಯಾವುವು? (ಮಾಹಿತಿ ಒದಗಿಸುವುದು).</td><td>
<ul>
<li>ಅಮೃತ ಕ್ರೀಡಾ ದತ್ತು ಯೋಜನೆಯನ್ನು ಪ್ರಾರಂಭಿಸಿ ಪ್ಯಾರಿಸ್ ಒಲಂಪಿಕ್ಸ್ 2024 ನಲ್ಲಿ ಪದಕ ಪಡೆಯುವ ಸಾಮರ್ಥವುಳ್ಳ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ಉನ್ನತ ತರಬೇತಿ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.</li>
<li>ರಾಜ್ಯದಲ್ಲಿ ಒಟ್ಟು 34 ಕ್ರೀಡಾ ವಸತಿ ಶಾಲೆ / ನಿಲಯಗಳನ್ನು ಸ್ಥಾಪಿಸಿ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ನುರಿತ ತರಬೇತುದಾರರಿಂದ ದೈನಂದಿನ ತರಬೇತಿ, ಊಟೋಪಹಾರ ಮತ್ತು ಕ್ರೀಡಾಗಂಟನ್ನು ನೀಡಲಾಗುತ್ತಿದೆ.</li>
<li>ಖೇಲೋ ಇಂಡಿಯಾ ಯೋಜನೆಯಡಿ ಜಿಲ್ಲೆಗಳಲ್ಲಿ ಖೇಲೋ ಇಂಡಿಯಾ ಕಿರು ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿ ದೈನಂದಿನ ತರಬೇತಿಯನ್ನು ನೀಡಲಾಗುತ್ತಿದೆ.</li>
</ul>
</td></tr>
</table>

ವೈಎಸ್‌ಡಿ-ಸಿಡಿಎನ್/27/2024

**(ಬಿ. ನಾಗೇಂದ್ರ)**
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

# ಅನುಬಂಧ

## ಕಲ್ಯಾಣ ಕರ್ನಾಟಕ ಜಿಲ್ಲೆಗಳಲ್ಲಿರುವ ಕ್ರೀಡಾಂಗಣಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | ಜಿಲ್ಲಾ ಕ್ರೀಡಾಂಗಣ (06 | ತಾಲ್ಲೂಕು ಕ್ರೀಡಾಂಗಣ (23) | ಒಳಾಂಗಣ (16) | ಈಜುಕೊಳ (08) | ಸಿಂಥೆಟಿಕ್ ಹಾಕಿ (02) | ಸಿಂಥೆಟಿಕ್ ಫುಟ್ಬಾಲ್ (01) |
|---|---|---|---|---|---|---|---|
| 1 | ಬಳ್ಳಾರಿ | ಬಳ್ಳಾರಿ | ಸಿರಗುಪ್ಪ | ಬಳ್ಳಾರಿ | ಬಳ್ಳಾರಿ | ಬಳ್ಳಾರಿ | ಬಳ್ಳಾರಿ |
| | | | ಸಂಡೂರು | | | | |
| | | | ಕೊಟ್ಟೂರು | | | | |
| 2 | ಬೀದರ್ | ಬೀದರ್ | ಬಸವಕಲ್ಯಾಣ | ಬೀದರ್ | ಬೀದರ್ | | - |
| | | | ಔರಾದ್ | ಹುಮ್ನಾಬಾದ್ | | | |
| | | | ಹುಮ್ನಾಬಾದ್ | ಬಸವಕಲ್ಯಾಣ | | | |
| | | | | ಭಾಲ್ಕಿ | | | |
| 3 | ಕಲಬುರ್ಗಿ | ಕಲಬುರ್ಗಿ | ಆಲಂದ | ಕಲಬುರಗಿ | ಕಲಬುರಗಿ | ಕಲಬುರಗಿ | |
| | | | ಚಿಂಚೋಳಿ | ಚಿತ್ತಾಪುರ | | | |
| | | | ಚಿತ್ತಾಪೂರ | ಜೇವರ್ಗಿ | | | |
| | | | ಜೇವರ್ಗಿ | ಚಿಂಚೋಳಿ | | | |
| | | | ಸೇಡಂ | | | | |
| 4 | ಕೊಪ್ಪಳ | ಕೊಪ್ಪಳ | ಕೊಪ್ಪಳ | ಕೊಪ್ಪಳ | ಕೊಪ್ಪಳ | | |
| | | | ಗಂಗಾವತಿ | ಗಂಗಾವತಿ | ಗಂಗಾವತಿ | | |
| | | | ಕುಷ್ಟಗಿ | ಕುಷ್ಟಗಿ | | | |
| | | | ಯಲಬುರ್ಗ | | | | |
| 5 | ರಾಯಚೂರು | ರಾಯಚೂರು | ದೇವದುರ್ಗ | ರಾಯಚೂರು | ರಾಯಚೂರು | | |
| | | | ಸಿಂಧನೂರು | ಲಿಂಗಸಗೂರು | | | |
| | | | ಲಿಂಗಸಗೂರು | | | | |
| 6 | ಯಾದಗಿರಿ | ಯಾದಗಿರಿ | ಶಹಾಪುರ | ಶಹಾಪೂರ | ಯಾದಗಿರಿ | | |
| | | | ಗುರುಮಿಠಕಲ್ | | | | |
| 7 | ವಿಜಯನಗರ | | ಹೂವಿನಹಡಗಲಿ | ಹೊಸಪೇಟೆ | ಹೊಸಪೇಟೆ | | |
| | | | ಹೊಸಪೇಟೆ | | | | |
| | | | ಹರಪನಹಳ್ಳಿ | | | | |